**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ :** 2025-2026 ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಸರ್ಕಾರಿ ಆಯುಷ್ ವೈದ್ಯಕೀಯ ಮಹಾವಿದ್ಯಾಲಗಳ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಸೀಟು ಹಂಚಿಕೆ ಮತ್ತು ಶುಲ್ಕ ನಿಗದಿ ಬಗ್ಗೆ.

**ಓದಲಾಗಿದೆ.**
1. ಆಯುಕ್ತರು, ಆಯುಷ್ ಇಲಾಖೆ ಇವರ ಪ್ರಸ್ತಾವನೆ ಸಂಖ್ಯೆ:AYUSH/ 19/DEV/2025, ದಿನಾಂಕ: 23.05.2025
2. ಸರ್ಕಾರದ ಆದೇಶ ಸಂಖ್ಯೆ: ಆಕುಕ 41 ಪಿಟಿಡಿ 2017, ದಿನಾಂಕ: 13.11.2018.
3. ಸರ್ಕಾರದ ಆದೇಶ ಸಂಖ್ಯೆ: ಆಕುಕ 41 ಪಿಟಿಡಿ 2017, ದಿನಾಂಕ: 10.08.2018.

*****

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಪ್ರಸ್ತಾವನೆಯಲ್ಲಿ, ಆಯುಕ್ತರು, ಆಯುಷ್ ಇಲಾಖೆ, ಬೆಂಗಳೂರು ಇವರು ಸರ್ಕಾರದ ಆದೇಶ ಸಂಖ್ಯೆ ಆಕುಕ 41 ಪಿಟಿಡಿ 2017, ದಿನಾಂಕ: 13.11.2018 ರಲ್ಲಿ ರಾಜ್ಯದಲ್ಲಿನ ಸರ್ಕಾರಿ ಆಯುಷ್ ಮಹಾವಿದ್ಯಾಲಯಗಳ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ವಾರ್ಷಿಕ ಶುಲ್ಕಗಳನ್ನು ನಿಗಧಿಪಡಿಸಿ ಆದೇಶ ಹೊರಡಿಸಿದೆ ಹಾಗೂ ವಾರ್ಷಿಕ ಶುಲ್ಕಗಳನ್ನು 2024-25 ನೇ ಶೈಕ್ಷಣಿಕ ಸಾಲಿನ ವರೆಗೂ ಪರಿಷ್ಕರಿಸಿರುವುದಿಲ್ಲ.

ಮುಂದುವರೆದು, ಸರ್ಕಾರಿ ಆಯಷ್ ಮಹಾವಿದ್ಯಾಲಯಗಳಲ್ಲಿನ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ವಾರ್ಷಿಕ ಶುಲ್ಕಗಳು ಕಡಿಮೆಯಿದ್ದು ಹಾಗೂ ಸರ್ಕಾರಿ ವೈದ್ಯಕೀಯ, ತಾಂತ್ರಿಕ ಕೋರ್ಸ್‌ಗಳಿಗೆ ನಿಗಧಿಪಡಿಸಿರುವ ಶುಲ್ಕಕಿಂತ ಆಯುಷ್ ಪದವಿ ಸ್ನಾತಕೋತ್ತರ ಕೋರ್ಸ್ ಗಳಿಗೆ ನಿಗಧಿಪಡಿಸಿರುವ ಬೋಧನಾ ಮತ್ತು ಇತರೆ ಶುಲ್ಕಗಳು ಕಡಿಮೆ ಶುಲ್ಕಗಳನ್ನು ಹೊಂದಿದೆ. ಆದಾಗ್ಯೂ ಈ ಶುಲ್ಕಗಳನ್ನು ಮೇಲೆ ಓದಲಾದ ಕ್ರಮ ಸಂಖ್ಯೆ (2) ಸರ್ಕಾರದ ಆದೇಶ ದಿನಾಂಕ: 13.11.2018ರಲ್ಲಿ ಪರಿಷ್ಕರಿಸಿದ್ದು, ನಂತರದಲ್ಲಿ ಪರಿಷ್ಕರಿಸಿರುವುದಿಲ್ಲ.

ಆದುದರಿಂದ, 2025-2026 ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಸರ್ಕಾರಿ ಆಯುಷ್ ವೈದ್ಯಕೀಯ ಮಹಾವಿದ್ಯಾಲಗಳ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಶುಲ್ಕಗಳನ್ನು ಹೆಚ್ಚಳ ಮಾಡಿ ಆದೇಶ ಹೊರಡಿಸುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಆಯುಕ್ತರು, ಆಯುಷ್ ಇಲಾಖೆಯ ಪ್ರಸ್ತಾವನೆ ಮತ್ತು ಲಭ್ಯವಿರುವ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಸರ್ಕಾರದ ಆದೇಶದಲ್ಲಿ ಖಾಸಗಿ ಅನುದಾನ ರಹಿತ ಮತ್ತು ಅನುದಾನಿತ ಆಯುಷ್ ಮಹಾವಿದ್ಯಾಲಯದಲ್ಲಿರುವ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳ ಸೀಟು ಹಂಚಿಕೆ ಕುರಿತಂತೆ ಸೀಟು ಹಂಚಿಕೆಯ ಅನುಪಾತ ಮತ್ತು ಶುಲ್ಕದಲ್ಲಿ ಯಾವುದೇ ಬದಲಾವಣೆ ಇಲ್ಲದೆ, ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಆದೇಶದಲ್ಲಿ ನಿಗದಿಪಡಿಸಿರುವ ಸರ್ಕಾರಿ ಆಯುಷ್ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿನ ವಾರ್ಷಿಕ ಶುಲ್ಕವನ್ನು ಮಾತ್ರ ಹೆಚ್ಚಿಸಲು ಸರ್ಕಾರವು ತೀರ್ಮಾನಿಸಿ, ಆದರಂತೆ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಕುಕ 267 ಪಿಐಎಂ 2025, ಬೆಂಗಳೂರು, ದಿನಾಂಕ:07.03.2026.**

ಪ್ರಸ್ತಾವನೆಯಲ್ಲಿ ವಿವರಿಸುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರಿ ಆದೇಶ ಸಂಖ್ಯೆ: ಆಕುಕ 41 ಪಿಟಿಡಿ 2017, ದಿನಾಂಕ: 13.11.2018 ರಲ್ಲಿನ ಸರ್ಕಾರಿ, ಖಾಸಗಿ ಅನುದಾನ ರಹಿತ ಮತ್ತು -

...2

AnyScanner

-ಅನುದಾನಿತ ಆಯುಷ್ ಮಹಾವಿದ್ಯಾಲಯದಲ್ಲಿರುವ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳ ಸೀಟು ಹಂಚಿಕೆ ಕುರಿತಂತೆ ಸೀಟು ಹಂಚಿಕೆಯ ಅನುಪಾತ ಮತ್ತು ಪ್ರವೇಶಾತಿ ಶುಲ್ಕದಲ್ಲಿ ಯಾವುದೇ ಬದಲಾವಣೆ ಇಲ್ಲದೆ 2019-20ನೇ ಶೈಕ್ಷಣಿಕ ಸಾಲಿನಿಂದ ಸರ್ಕಾರಿ ಆಯುಷ್ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿನ ವಾರ್ಷಿಕ ಶುಲ್ಕವನ್ನು ವರ್ಷಕ್ಕೆ ಶೇಕಡ 3 ರಂತೆ ಮಾತ್ರ ನಿಗದಿಪಡಿಸಿ 2026-2027ನೇ ಶೈಕ್ಷಣಿಕ ಸಾಲಿನಿಂದ ಈ ಕೆಳಗಿನಂತೆ ವಾರ್ಷಿಕ ಶುಲ್ಕವನ್ನು ವಿಂಗಡಣೆ ಮಾಡಿ ಆದೇಶಿಸಿದೆ.

**ಸರ್ಕಾರಿ ಆಯುಷ್ ವೈದ್ಯಕೀಯ ಮಹಾವಿದ್ಯಾಲಯದ ಪದವಿ ಮತ್ತು ಸ್ನಾತಕೋತ್ತರ ಕೋರ್ಸಿನ ಪರಿಷ್ಕೃತ ವಾರ್ಷಿಕ ಶುಲ್ಕದ ವಿವರ:-**

| ಕ್ರ.ಸಂ | ಶುಲ್ಕದ ವಿವರ | ಪದವಿ ಕೋರ್ಸ್‌ಗಳಿಗೆ (ರೂಪಾಯಿಗಳಲ್ಲಿ) | ಸ್ನಾತಕೋತ್ತರ ಕೋರ್ಸ್‌ಗಳಿಗೆ (ರೂಪಾಯಿಗಳಲ್ಲಿ) |
|---|---|---|---|
| 01 | Tution Fee | 19,002.00 | 48,137.00 |
| 02 | RGUHS Fee (1st Year Only) | 5,000.00 | 7,000.00 |
| 03 | Admission Fee | 380.00 | 380.00 |
| 04 | Sports Fee | 1,267.00 | 1,267.00 |
| 05 | Student Welfare Fund Fee | 127.00 | 127.00 |
| 06 | Library Fee | 1,267.00 | 1,267.00 |
| 07 | Magazine Fee | 760.00 | 760.00 |
| 08 | Medical Fee | 63.00 | 63.00 |
| 09 | Caution Deposit Fee | 950.00 | 950.00 |
| 10 | Students Association Fee | 760.00 | 760.00 |
| 11 | Identity Card Fee | 127.00 | 127.00 |
| 12 | Lab Fee | 633.00 | 633.00 |
| | Total | 30,335.00 | 61,471.00 |

ಮುಂದುವರೆದು ಮುಂದಿನ ಶೈಕ್ಷಣಿಕ ಸಾಲಿನಿಂದ ಪ್ರತಿ ವರ್ಷಕ್ಕೆ ಶೇಕಡ 3 ರಂತೆ ಸರ್ಕಾರಿ ಆಯುಷ್ ವೈದ್ಯಕೀಯ ಮಹಾವಿದ್ಯಾಲಯಗಳಿಗೆ ವಾರ್ಷಿಕ ಶುಲ್ಕವನ್ನು (RGUHS fee ಅನ್ನು ಹೊರತುಪಡಿಸಿ) ಆಯುಷ್ ಇಲಾಖೆಯ ಹಂತದಲ್ಲಿಯೇ ಪರಿಷ್ಕರಿಸಿ ವಾರ್ಷಿಕ ಶುಲ್ಕವನ್ನು ನಿಗದಿ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,
7/3
**(ಶ್ರೀಪತಿ ವಿ.ಕೆ)**
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾವೈಪ & ಸಮನ್ವಯ)

**ಇವರಿಗೆ**

1. ಪ್ರಧಾನ ಮಹಾಲೇಖಪಾಲರು (ಜಿ.&ಎಸ್.ಎಸ್.ಎ/ಇ&ಆರ್.ಎಸ್.ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560 001.

. . . 3

AnyScanner

2. ಪ್ರಧಾನ ಮಹಾಲೇಖಪಾಲರು (ಎ.&ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329, -560 001.
3. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, 18ನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು.
4. ಆಯುಕ್ತರು, ಆಯುಷ್ ಇಲಾಖೆ, ಧನ್ವಂತರಿ ರಸ್ತೆ. ಬೆಂಗಳೂರು-560 009.
5. ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 4ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು.

**ಪ್ರತಿಯನ್ನು: -**

1. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
3. ಸರ್ಕಾರದ ಅಪರ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

AnyScanner

| ಖಾಸಗಿ ಅನುದಾನರಹಿತ ಮಹಾವಿದ್ಯಾಲಯಗಳಲ್ಲಿ BNYS ಪದವಿ ಕೋರ್ಸ್‌ಗಳಿಗೆ ಸೀಟು ಹಂಚಿಕೆ ಮತ್ತು ಶುಲ್ಕ ನಿಗಧಿ | | | | | | | | | | |
|---|---|---|---|---|---|---|---|---|---|---|
| Sl.No | Particular | Percentage | 11.07.2019 | 19.09.2020 | 10.11.2021 | 13.10.2022 | 14.09.2023 | 22.08.2024 | 02.08.2025 | 06.07.2026 |
| 1 | 2 | 3 | 4 | 5 | 6 | 7 | 4 | 7 | 10 | 10 |
| 1 | ರಾಜ್ಯ ಸರ್ಕಾರ ಭರ್ತಿ ಮಾಡುವ ಸರ್ಕಾರಿ ಕೋಟಾ ಸೀಟುಗಳು | 20% | 60000 | 60000 | 60000 | 60000 | 60000 | 60000 | 60000 | 60000 |
| 2 | ಕೆ.ಇ.ಎ. ಮೂಲಕ ಭರ್ತಿ ಮಾಡುವ ಆಡಳಿತ ಮಂಡಳಿ ಸೀಟುಗಳು | 20% | 183750 | 183750 | 183750 | 183750 | 183750 | 183750 | 183750 | 183750 |
| 3 | ಆಡಳಿತ ಮಂಡಳಿಗಳು ಭರ್ತಿ ಮಾಡುವ ಸೀಟುಗಳು | 40% | 183750 | 220500 | 220500 | 220500 | 183750 | 183750 | 183750 | 183750 |
| 4 | NRI / ಆಡಳಿತ ಮಂಡಳಿಯ ಸೀಟುಗಳು | 20% | 700000 | 700000 | 700000 | 700000 | 700000 | 700000 | 700000 | 700000 |

Commissioner
Ayurveda, Yoga & Nature Care
Unani, Siddha & Homoeopathy
(Ayush) Directorate, Dhanvantri Road,
Bangalore - 560 009